

ಮೋದಿ ತಂದ ಕೃಷಿ ಕಾಯ್ದೆ ರೈತರಿಗೇಕೆ ಮಾರಕ?

ಅಭಿಪ್ರಾಯ

ಪಿ.ಚಿದಂಬರಂ ಕೇಂದ್ರದ ಮಾಜಿ ಸಚಿವ

vveditoped@gmail.com

ಪ್ರತಿಕ್ರಿಯೆ

ಡಾ.ಸಮೀರ್ ಕಾಗಲ್ಕರ್

vveditoped@gmail.com

ಎಪಿಎಂಸಿ ಕಾಯಿದೆ ಟೀಕೆ ಹಿಂದಿನ ಚಿದಂಬರ ರಹಸ್ಯವೇನು?

ಇತ್ತೀಚೆಗೆ ವಿಶ್ವವಾಣಿ ಪತ್ರಿಕೆಯಲ್ಲಿ ಕೇಂದ್ರದ ಮಾಜಿ ಸಚಿವ ಪಿ.ಚಿದಂಬರಂ ಅವರು ಬರೆದ ಅಂಕಣದ ವಿಮರ್ಶೆಗೆ ಪ್ರತಿಕ್ರಿಯೆ ಯಾಗಿ ಈ ಲೇಖನ ಬರೆದಿದ್ದೇನೆ. ಚಿದಂಬರಂ ಅವರು ತಮ್ಮ ಲೇಖನದಲ್ಲಿ ನಾಲ್ಕೈದು ಪ್ರಮುಖ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಮೊದಲನೆಯದಾಗಿ ಪ್ರಧಾನಿ ನರೇಂದ್ರ ಮೋದಿ, ಅವರ ಸಚಿವ ಸಂಪುಟದ ಸದಸ್ಯರು ಹಾಗೂ ಬಿಜೆಪಿ ವಕ್ತಾರರು ಸಮರ್ಪಕ ಅಂಕಿ ಅಂಶಗಳನ್ನು ನೀಡದೆ ಎಪಿಎಂಸಿ ತಿದ್ದುಪಡಿ ಕಾಯ್ದೆ ರೈತರಿಗೆ ಅತ್ಯಂತ ಪ್ರಯೋಜನಕರ ಎಂದು ಹೇಳುತ್ತಿರುವುದಾಗಿ ಕುಹಕವಾಡಿದ್ದಾರೆ. ಎರಡನೆಯ ದಾಗಿ, ಎಲ್ಲರೊಡನೆ ಸಂವಾದ, ವಿಚಾರ ವಿನಿಮಯ ಮಾಡಿ ಈ ತಿದ್ದುಪಡಿ ಮಸೂದೆಗಳನ್ನು ಅನುಷ್ಠಾನಕ್ಕೆ ತರಬೇಕಿತ್ತು, ತರಾತುರಿಯಲ್ಲಿ ಜಾರಿಗೊಳಿಸಿದ್ದು ಸರಿಯಲ್ಲ ಎಂದು ಆಕ್ಷೇಪವೆತ್ತಿದ್ದಾರೆ. ಮೂರನೆಯ ದಾಗಿ ಈ ಮಸೂದೆ ಕೇಂದ್ರದ ವ್ಯಾಪ್ತಿಗೆ ಬರುವುದಿಲ್ಲ, ಇದೇನಿದ್ದರೂ ರಾಜ್ಯಗಳ ವ್ಯಾಪ್ತಿಗೆ ಬರುವಂಥದ್ದು ಎಂದು ಕುಚೋದ್ಯದ ಮಾತನ್ನಾಡಿದ್ದಾರೆ. ನಾಲ್ಕನೆಯ ದಾಗಿ ಅವರು ಈ ಮಸೂದೆ ಕುರಿತು ಕಾಂಗ್ರೆಸ್ ಚಿಂತನೆ ಏನಿತ್ತು ಎಂಬ ಕುರಿತು ವಿವರ ನೀಡಿದ್ದಾರೆ. ಈ ನಾಲ್ಕೂ ವಿಚಾರಗಳ ಕುರಿತು ಒಂದೊಂದಾಗಿ ವಿಮರ್ಶಿಸಿ ಇದರ ಸಾರಾಂಶದ ಕುರಿತು ಚರ್ಚಿಸಬಹುದು.

ಮೊದಲನೆಯ ಅನಿಸಿಕೆಯಲ್ಲಿ ಕುಹಕ ಬೇಕಿರಲಿಲ್ಲ. 1985ನೇ ಇಸವಿಯಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಒಂದು ಮಾತು ಹೇಳಿದರು. ರಾಜೀವ್ ಅವರು ಪ್ರಧಾನಿಯಾಗುವ ಮೊದಲು ಅವರ ತಾಯಿ ಇಂದಿರಾ ಗಾಂಧಿ ಪ್ರಧಾನಿ ಆಗಿದ್ದಾಗ ಅಭಿವೃದ್ಧಿಗೆ ಸಂಬಂಧಿಸಿ ದೆಹಲಿಯಿಂದ ಒಂದು ರುಪಾಯಿ ಕಳುಹಿಸಿದರೆ ಅದು ಅಂತಿಮ ಫಲಾನುಭವಿ ಅಥವಾ ತಲುಪಬೇಕಿದ್ದಲ್ಲಿಗೆ ತಲುಪುವ ವೇಳೆ ಹದಿನೈದು ಪೈಸೆ ಆಗಿರುತ್ತಿತ್ತು ಎಂಬುದೇ ಅವರ ಮಾತಿನ ಸಾರವಾಗಿತ್ತು. ಈ ವಿಚಾರ ಬಳಿಕ ಕಾಂಗ್ರೆಸ್ ಪಕ್ಷದೊಳಗೆ ಬಹುಚರ್ಚೆಗೆ ಎಡೆ ಮಾಡಿಕೊಟ್ಟಿತು. ಆದರೆ, ಅಂತಿಮವಾಗಿ ಅದರಿಂದ ಪ್ರಯೋಜನ ವೇನೂ ಆಗಲಿಲ್ಲ. ರಾಜೀವ್ ಗಾಂಧಿ ಅವರ ಇದೇ ಅಂಕಿ ಅಂಶವನ್ನು ಆಧಾರವಾಗಿ ಇಟ್ಟುಕೊಂಡ ಈಗಿನ ಪ್ರಧಾನಿ ಮೋದಿಯವರು ಜಾಮ್ ಟ್ರಿನಿಟಿ (ಜನಧನ್, ಆಧಾರ್, ಮೊಬೈಲ್) ಆಧಾರದಿಂದ ನೇರ ಫಲಾನುಭವಿಗೇ ಹಣ ವರ್ಗಾವಣೆಗೆ (ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್) ಮುಂದಾಗಿದ್ದಾರೆ. ದೆಹಲಿಯಿಂದ ಫಲಾನುಭವಿಗೆ ಕಳುಹಿಸಿದ ಒಂದು ರುಪಾಯಿ ಪೂರ್ಣವಾಗಿ ಸಂಬಂಧಿತರಿಗೆ ತಲುಪುವ ವ್ಯವಸ್ಥೆಯನ್ನು ಮೋದಿಯವರು ಮಾಡಿದ್ದಾರೆ. ಕಾಂಗ್ರೆಸ್ ಪಕ್ಷವು ಅಂಕಿ ಅಂಶವನ್ನಷ್ಟೇ ನೀಡಿ ಮಾತಿಗಷ್ಟೇ ತನ್ನ ಕೆಲಸವನ್ನು ಸೀಮಿತಗೊಳಿಸಿತು. ಆದರೆ, ಕೇಂದ್ರದ ಬಿಜೆಪಿ ಸರಕಾರ ಅದನ್ನು ಅನುಷ್ಠಾನಕ್ಕೆ ತರುವ ಕೆಲಸ ಮಾಡಿದೆ.

ಎಪಿಎಂಸಿ ವ್ಯವಸ್ಥೆ ಸರಿಯಾಗಿಲ್ಲ. ಅದನ್ನು ಬದಲಾವಣೆ ಮಾಡಬೇಕು. ಮಾದರಿ ಎಪಿಎಂಸಿ ಕಾಯಿದೆ ಅನುಷ್ಠಾನ ಅಗತ್ಯ ಎಂಬ ಚಿಂತನೆ 2005ರಲ್ಲೇ ನಡೆದಿತ್ತು. ಅದರ ಕುರಿತು ಚರ್ಚೆಗಳೂ ನಡೆದವು. ದಲ್ಲಾಳಿಗಳು ಶೇ.20ರಿಂದ 30ರಷ್ಟು ಮೊತ್ತವನ್ನು ತಮ್ಮ ಜೇಬಿಗಿಳಿಸುತ್ತಾರೆ, ಇದರಿಂದ ಕೃಷಿಕ - ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಕೇಂದ್ರದ ಪರವಾಗಿ ಸಂಸತ್ತಿನಲ್ಲಿ ಮಾತನಾಡಿದ ಕಾಂಗ್ರೆಸ್‌ನ ಕಪಿಲ್ ಸಿಬಲ್ ಅವರು ಪ್ರಸ್ತಾಪಿಸಿದ್ದರು. 2013ನೇ ಇಸವಿಯಲ್ಲಿ ರಾಹುಲ್ ಗಾಂಧಿ ಅವರ ಸಮ್ಮುಖದಲ್ಲಿ ನಡೆದ ಪತ್ರಿಕಾ ಸಂದರ್ಶನದಲ್ಲಿ ತರಕಾರಿ, ಹಣ್ಣು, ದವಸ ಧಾನ್ಯ ಮೊದಲಾದವುಗಳನ್ನು ಎಪಿಎಂಸಿ ಕಪಿಮುಷ್ಟಿಯಿಂದ ಬಿಡುಗಡೆ ಮಾಡಬೇಕು ಎಂದು ಅಂಕಿ ಅಂಶಗಳ ಜತೆ ತಿಳಿಸಿದ್ದರು. ಅಂಕಿ ಅಂಶಗಳ ಜತೆ ಮಾತನಾಡುವುದು ಕಾಂಗ್ರೆಸ್‌ನವರಿಗೆ ಅಭ್ಯಸವಾಗಿದೆ. ಆದರೆ, ಅದರ ಅನುಷ್ಠಾನದತ್ತ, ಸಮಸ್ಯೆಗಳ ಪರಿಹಾರದತ್ತ ಕಾಂಗ್ರೆಸ್ ಗಮನ ಕೊಟ್ಟಿಲ್ಲ ಎಂಬುದೂ ಅಷ್ಟೇ ಸತ್ಯ. ಆದರೆ, ಅದೇ ಅಂಕಿ ಅಂಶಗಳನ್ನು ಆಧರಿಸಿ ರೈತರ ಸಮಸ್ಯೆ ಪರಿಹಾರಕ್ಕೆ ಮೋದಿ ಅವರ ಸರಕಾರ ಕಳೆದ ಆರು ವರ್ಷಗಳಿಂದ ನಿಷ್ಠೆ, ಪ್ರಾಮಾಣಿಕತೆಯಿಂದ ಕಾರ್ಯ ಪ್ರವೃತ್ತವಾಗಿದೆ. ಆದ್ದರಿಂದ ಅಂಕಿ ಅಂಶದ ವಿಚಾರದಲ್ಲಿ ಕುಹಕ ಸಲ್ಲದು.

ಸಂವಾದ, ಚರ್ಚೆಯ ಬಳಿಕ ಈ ಮಸೂದೆ ಜಾರಿಗೊಳಿಸಬೇಕಿತ್ತು, ತರಾತುರಿ ಬೇಕಿರಲಿಲ್ಲ ಎಂಬ ಎರಡನೇ ಅಂಶ. 2018-19ರಲ್ಲಿ ಕೃಷಿ ಸ್ಥಾಯಿ ಸಮಿತಿ ಕೊಟ್ಟ ವರದಿಯನ್ನಾಧರಿಸಿ ಯೇ ಈ ಕಾಯಿದೆ ಜಾರಿಗೊಳಿಸಲಾಗಿದೆ. ಆ ವರದಿಯಲ್ಲಿ ಕೊಟ್ಟಿದ್ದ ಅಂಕಿ ಅಂಶ, ಶಿಫಾರಸ್ಸುಗಳನ್ನು ಆಧಾರವಾಗಿ ಇಟ್ಟುಕೊಂಡೇ ಕಾಯಿದೆ ಜಾರಿಗೊಳಿಸಲಾಗಿದೆ. ಕಾಂಗ್ರೆಸ್‌ನ ಮಧ್ಯ ಪ್ರದೇಶದ ಅಂದಿನ ಮುಖ್ಯಮಂತ್ರಿ ಕಮಲ್‌ನಾಥ್ ಸೇರಿ ಏಳು ರಾಜ್ಯಗಳ ಮುಖ್ಯಮಂತ್ರಿಗಳಿದ್ದ ಉನ್ನತಾಧಿಕಾರ ಸಮಿತಿಯು ಶಿಫಾರಸ್ಸುಗಳನ್ನು ನೀಡಿತ್ತು. ಅದರ ಆಧಾರದಲ್ಲೇ ಮೇ 5ರಂದು ಆತ್ಮನಿರ್ಭರ ಭಾರತದ ಪ್ರಸ್ತಾಪವನ್ನು ಪ್ರಧಾನಿ ಮೋದಿ ಅವರು ದೇಶದ ಮುಂದಿಟ್ಟಿದ್ದರು. ಅದಾಗಿ ಒಂದು ತಿಂಗಳೊಳಗೆ ಎಪಿಎಂಸಿ ವಿಚಾರವಾಗಿ ಸುಗ್ರೀವಾಜ್ಞೆಯೂ ಹೊರಬಂದಿತ್ತು. ಅದಾದ ಮೂರೂವರೆ ತಿಂಗಳ ಬಳಿಕ ಸೆಪ್ಟೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ಇದನ್ನು ಮಸೂದೆ ರೂಪದಲ್ಲಿ ತರಲಾಯಿತು. ಸೂಕ್ತ ಬದಲಾವಣೆಗೆ ಸಿದ್ಧರಿದ್ದೇವೆ ಎಂದು ಸಚಿವರು, ಪ್ರಧಾನಿ ಹೇಳಿದರೂ ವಿರೋಧ ಪಕ್ಷದವರು ಗಲಾಟೆ ಮಾಡಿದರು. ಇದು ಬಳಿಕ ಧ್ವನಿಮತದಿಂದ ಅಧಿವೇಶನದಲ್ಲಿ ಅಂಗೀಕಾರ ಗೊಂಡಿತು. ಆದ್ದರಿಂದ ತರಾತುರಿಯಲ್ಲಿ ಇದು ಅಂಗೀಕಾರವಾಗಿಲ್ಲ ಎಂಬುದೂ ಸುಸ್ಪಷ್ಟ. ಚಿಂತನ, ಮಂಥನದ ಜತೆಗೆ ರಾಜ್ಯಗಳ ಸಲಹೆ - ಶಿಫಾರಸ್ಸುಗಳನ್ನು ಒಳಗೊಂಡ ಮಸೂದೆ ಇದೆಂಬುದೂ ಈ ಮೂಲಕ ಸ್ಪಷ್ಟವಾಗುತ್ತದೆ.

ಮೂರನೆಯ ಅಂಶ. ರಾಜ್ಯ ಸರಕಾರಗಳು ರೂಪಿಸಿದ ಒಂದು ಉತ್ತಮ ಮಸೂದೆಯನ್ನು ಇನ್ನೊಂದು ರಾಜ್ಯ ಅನುಷ್ಠಾನಕ್ಕೆ ತರಬೇಕಿತ್ತು. ಇದು ಕೇಂದ್ರದ ವ್ಯಾಪ್ತಿಗೆ ಬರುವುದಿಲ್ಲ ಎಂಬ ಆಕ್ಷೇಪದ ವಿಚಾರ. ಕೇಂದ್ರ ಸರಕಾರ ನಿರಂತರವಾಗಿ ಸಂವಿಧಾನ ದ ಚೌಕಟ್ಟಿನಡಿಯೇ ಕರ್ತವ್ಯ ನಿರ್ವಹಿಸುತ್ತಾ ಬಂದಿದೆ. ರಾಜ್ಯ ಸರಕಾರದ ಹಿತಾಸಕ್ತಿ ಕಡೆಗಣಿಸಿ ಕೇಂದ್ರ ಸರಕಾರ ಕಾರ್ಯ ನಿರ್ವಹಿಸಿಲ್ಲ. ತನಗಿರುವ ಅಧಿಕಾರವನ್ನು ಗಮನದಲ್ಲಿ ಇಟ್ಟುಕೊಂಡೇ ಅದು ಕೆಲಸ ಮಾಡಿದೆ. ಆಹಾರೋತ್ಪನ್ನದ ವ್ಯಾಪಾರಕ್ಕೆ ಸಂಬಂಧಿಸಿ ಮಾರುಕಟ್ಟೆ ಸುಧಾರಣೆಗಷ್ಟೇ ಕೇಂದ್ರ ಸರಕಾರ ಮುಂದಾಗಿದೆ. ಕೃಷಿ ಮಾರುಕಟ್ಟೆ ಸುಧಾರಣಾ ಮಸೂದೆಯ ಸಂದರ್ಭದಲ್ಲೇ ಕರ್ನಾಟಕದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಭೂಸುಧಾರಣಾ ಮಸೂದೆಗೆ ತಿದ್ದುಪಡಿ ತಂದರು. ಭೂಸುಧಾರಣೆಗೆ ಸಂಬಂಧಿಸಿ ಬದಲಾವಣೆಯನ್ನು ರಾಜ್ಯ ಸರಕಾರವಷ್ಟೇ ಮಾಡಬಹುದಿತ್ತು. ಅದನ್ನು ಗಮನಿಸಿ ಕೇಂದ್ರ ಸರಕಾರ ಅದರ ಕುರಿತು ಯಾವುದೇ ಬದಲಾವಣೆ ಮಾಡಿಲ್ಲ ಎಂಬುದೂ ಇಲ್ಲಿ ಗಮನಿಸ ಬೇಕಾದ ಅಂಶ. ಕೇಂದ್ರ ಸರಕಾರ ಈ ವಿಷಯದಲ್ಲಿ ತನ್ನ ಸರಹದ್ದನ್ನು ಮೀರಿಲ್ಲ ಎಂಬುದೂ ಗಮನಾರ್ಹ.

ದೀರ್ಘಾವಧಿಯಲ್ಲಿ ಎಪಿಎಂಸಿ ರದ್ದು ಮಾಡುವುದು ಉತ್ತಮ ಎಂಬ ಸಲಹೆ ಅವರದು. ಮಾರಾಟಗಾರರು ಒಬ್ಬರಲ್ಲ, ಹತ್ತಾರು ಜನ ಇರಬೇಕು. ಈಗ ನೀವು ಮಾಡಿರುವ ರೀತಿ ಸರಿಯಿಲ್ಲ. ಹಳ್ಳಿ, ತಾಲೂಕು, ಜಿಲ್ಲೆಗಳಲ್ಲಿ ಪರ್ಯಾಯ ಮಾರುಕಟ್ಟೆ ಸೃಷ್ಟಿಸಿದ ಬಳಿಕವಷ್ಟೇ ಎಪಿಎಂಸಿಗಳ ಏಕಸ್ವಾಮ್ಯ ಮುರಿಯುವ ಕೆಲಸ ಮಾಡಬೇಕಿತ್ತು. ರೈತರಿಗೆ ಪರ್ಯಾಯ ಮಾರ್ಗ ತೋರದೆ ಹೊಸ ತಿದ್ದುಪಡಿ ತರಲಾಗಿದೆ ಎಂಬ ವಾದವನ್ನು ಅವರು ಮಂಡಿಸಿದ್ದಾರೆ. ಈ ಮಂಡನೆ ಅತ್ಯಂತ ದುರದೃಷ್ಟಕರ ಎಂದೇ ಹೇಳಬೇಕು. ಭೌಗೋಳಿಕವಾಗಿ ಒಂದು ಮಾರುಕಟ್ಟೆಗೆ ಇರಬೇಕಾದ ವ್ಯಾಪ್ತಿ, ಖರೀದಿದಾರರು ಎಷ್ಟು ಜನ ಇರಬೇಕು ಎಂಬ ಅಂಶವನ್ನು ಇಲ್ಲಿ ಪರಿಗಣಿಸಬೇಕಾಗುತ್ತದೆ. ದೇಶದಾದ್ಯಂತ ಸಹಸ್ರಾರು ಮಾರುಕಟ್ಟೆ ತೆರೆಯಿರಿ, ಅದು ರೈತರಿಗೆ ಅನುಕೂಲಕರ ಎಂಬ ವಾದ ಕಾಂಗ್ರೆಸ್‌ನವರದು. ಇದು ಮೇಲ್ನೋಟಕ್ಕೆ ಸತ್ಯ ಎನಿಸಿದರೂ ಆಳವಾಗಿ ಅಧ್ಯಯನ ಮಾಡಿದರೆ ಇದರಲ್ಲಿ ಹುರುಳಿಲ್ಲ ಎಂಬುದು ಗೋಚರಿಸುತ್ತದೆ. ಒಂದು ದೇಶ ಒಂದು ಮಾರುಕಟ್ಟೆ (ಒನ್ ನೇಷನ್ ಒನ್ ಮಾರ್ಕೆಟ್) ಎಂಬ ಪರಿಕಲ್ಪನೆ ಬಿಜೆಪಿಯದು. ಆ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ಸಂಪೂರ್ಣ ದೇಶವನ್ನು ಏಕ ಮಾರುಕಟ್ಟೆಯನ್ನಾಗಿ ಮಾಡುವುದರಿಂದ ರೈತರೊಬ್ಬರು ಉತ್ಪನ್ನವನ್ನು ಕೇವಲ ಎಪಿಎಂಸಿ ಅಥವಾ ತಾಲೂಕು, ಜಿಲ್ಲೆಯ ವ್ಯಾಪ್ತಿಯಲ್ಲಷ್ಟೇ ಮಾರಾಟ ಮಾಡಬೇಕೆಂಬ ಪರಿಮಿತಿ ಇರುವುದಿಲ್ಲ. ದೇಶದ ಯಾವುದೇ ಪ್ರದೇಶದಲ್ಲಿ ಮಾರಾಟ ಮಾಡಲು ಅವಕಾಶ ಲಭಿಸುತ್ತದೆ. ಕಾಂಗ್ರೆಸ್ ವಾದ ಮಾಡಿದ ರೀತಿಯಲ್ಲಿ ಹಳ್ಳಿ, ತಾಲೂಕು ಅಥವಾ ಜಿಲ್ಲೆಗಳಲ್ಲಿ ಪರ್ಯಾಯ ಮಾರುಕಟ್ಟೆ ರೂಪಿಸಿದರೆ ಎಪಿಎಂಸಿ ಬದಲು ಮತ್ತೊಂದು ಮಾರುಕಟ್ಟೆ ಬಂದಂತಾಗಲಿದೆ. ಅಲ್ಲಿ ನಾಲ್ಕೈದು ವರ್ತಕರು ಇರುತ್ತಾರೆ. ಹಳ್ಳಿಯಲ್ಲಿ ಹೊಸ ಮಾರುಕಟ್ಟೆ ಬಂದರೆ ಅದು ಮತ್ತೊಂದು ಕಪಿಮುಷ್ಟಿ ಹೊಂದಿದ ವ್ಯವಸ್ಥೆ ಆಗಲಿದೆ. ಬಿಜೆಪಿ ಚಿಂತನೆಯಂತೆ ಹೊಸ ವ್ಯವಸ್ಥೆ ಬರುವುದರಿಂದ ಸಾವಿರಾರು ವರ್ತಕರ ಜಾಲದಡಿ ಯಾರಿಗಾದರೂ ಒಬ್ಬರಿಗೆ ಉತ್ಪನ್ನ ಮಾರಾಟ ಮಾಡಲು ರೈತರಿಗೆ ಅವಕಾಶ ಲಭಿಸಲಿದೆ. ಖರೀದಿದಾರರು ನೂರಾರು, ಸಾವಿರಾರು ಸಂಖ್ಯೆಯಲ್ಲಿ ಇದ್ದಾಗ ಸಹಜವಾಗಿಯೇ ಸ್ಪರ್ಧೆ ಹೆಚ್ಚಾಗಿ ಅತ್ಯುತ್ತಮ ದರ ಲಭಿಸುತ್ತದೆ. ಆದ್ದರಿಂದ ಕಾಂಗ್ರೆಸ್‌ನ ಚಿಂತನೆ, ಪ್ರಣಾಳಿಕೆಯಲ್ಲಿ ಇದೆ ಎನ್ನಲಾದ ಅಂಶಗಳು ತೀರಾ ಅಪ್ರಾಯೋಗಿಕವಾಗಿವೆ.

ಕೊನೆಯದಾಗಿ ಒಂದು ವಿಚಾರ ಹೇಳಲೇಬೇಕು. ಷೆರ್ಲಾಕ್ ಹೋಮ್ಸ್‌ಗೆ ಸಂಬಂಧಿಸಿದ ಕಥೆ ಇದು. ಮನೆಯಲ್ಲಿ ಒಂದು ಕಳ್ಳತನ ಆದ ಸಂದರ್ಭ ಇದಾಗಿದೆ. ಆ ಮನೆಯಲ್ಲಿ ನಾಯಿ ಇದ್ದರೂ ಅದು ಬೊಗಳಲಿಲ್ಲ ಯಾಕೆ? ಆ ನಾಯಿಗೆ ಗೊತ್ತಿರುವ ಮನೆಯ ಯಾರೋ ಒಬ್ಬರು ಇರುವ ಕಾರಣ ನಾಯಿ ಬೊಗಳಲಿಲ್ಲ ಎಂದು ಷೆರ್ಲಾಕ್ ಹೋಮ್ಸ್ ಅವರು ನ್ಯಾಯಾಲಯಕ್ಕೆ ತಿಳಿಸುತ್ತಾರೆ. ಕೇಂದ್ರದ ಮಾಜಿ ಹಣಕಾಸು ಸಚಿವರು ಕೇವಲ ಎಪಿಎಂಸಿ ತಿದ್ದುಪಡಿ ಕಾಯ್ದೆ ಕುರಿತು ಮಾತ್ರ ಮಾತನಾಡಿದ್ದಾರೆ. ಮಿಕ್ಕಿದ ಎರಡು ಮಸೂದೆಗಳ ಕುರಿತು ಯಾವುದೇ ಪ್ರಸ್ತಾಪ ಮಾಡಿಲ್ಲ. ಮೊದಲನೆಯದಾಗಿ ಅಗತ್ಯ ವಸ್ತುಗಳ ಕಾಯಿದೆಗೆ (ಇಸಿಎ) ಮಾಡಿದ ತಿದ್ದುಪಡಿಯಿಂದ ಬೇಕಾದಷ್ಟು ಉತ್ಪನ್ನ ಶೇಖರಣೆ ಮಾಡಿ ಸಂಸ್ಕರಣೆ ನಡೆಸಿ ಮಾರಾಟ ಮಾಡಲು ಅವಕಾಶವಾಗಲಿದೆ. ಸ್ಥಳೀಯವಾಗಿ ಶೇಖರಣೆ, ಸಂಸ್ಕರಣಾ ಘಟಕಗಳು, ಕೃಷಿ ಉತ್ಪನ್ನಗಳ ಪೂರಕ ಘಟಕಗಳೂ ಸ್ಥಾಪನೆ ಯಾಗಲಿವೆ. ಸ್ಥಳೀಯವಾಗಿ ಉದ್ಯಮೀಕರಣ ಆದಾಗ ಆಯಾ ಪ್ರದೇಶದ ಜನರಿಗೆ ಉದ್ಯೋಗ ಲಭಿಸಲಿದೆ. ಇವನ್ನು ತಿಳಿಯದೆ ಷೆರ್ಲಾಕ್ ಹೋಮ್ಸ್ ಕಥೆಯ ಮಾದರಿಯಲ್ಲಿ ಚಿದಂಬರಂ ಅವರು ಮೊದಲನೇ ಕಾಯಿದೆ ಕುರಿತಷ್ಟೇ ಪ್ರಸ್ತಾಪಿಸಿದ್ದಾರೆ. ಅಲ್ಲದೆ ಗುತ್ತಿಗೆ ಆಧಾರಿತ ಕೃಷಿಯೂ ಬಂದಾಗ ರೈತರಿಗೆ ಇನ್ನೂ ಲಾಭ ದೊರಕಲಿದೆ. ಹಿಂದೆ ಉತ್ಪನ್ನ ಮಾರಾಟ ಮಾಡಿದ ರೈತರಿಗೆ ಒಟ್ಟು ದರದ ಶೇ.30 ಮಾತ್ರ ಸಿಗುತ್ತಿತ್ತು. ಉಳಿದ ಶೇ.70 ದಲ್ಲಾಳಿಗಳ ಪಾಲಾಗುತ್ತಿತ್ತು. ಹೊಸ ಕಾಯಿದೆಯಿಂದ ಈ ಚಿತ್ರಣ ಸಂಪೂರ್ಣ ಬದಲಾಗಿ ರೈತರಿಗೆ ಪೂರ್ಣ ದರ ಸಿಗಲಿದೆ.

ಕೇವಲ ಎಪಿಎಂಸಿಯನ್ನು ತೆಗೆದು ಮತ್ತೊಂದು ಪರ್ಯಾಯ ಮಾರುಕಟ್ಟೆ ಮಾಡಿದಾಗ ರೈತರಿಗೆ ಏನೂ ಲಾಭ ಆಗಲಾರದು. ದೇಶಾದ್ಯಂತ ಏಕ ಮಾರುಕಟ್ಟೆ ಮಾಡಿ ಅಲ್ಲಿರುವ ಲಕ್ಷಾಂತರ ಜನ ಖರೀದಿದಾರರಾದಾಗ, ತಂತ್ರಜ್ಞಾನ ಬಳಸಿ ಎಲ್ಲಿಂದ ಬೇಕಾದರೂ ಮಾರಾಟ ಮತ್ತು ಖರೀದಿ ಮಾಡಬಹುದು ಎಂಬ ಕಾಯಿದೆಯಿಂದ ರೈತರಿಗೆ ಧಾರಣೆಯಲ್ಲಿ ಖಚಿತತೆ ಲಭಿಸಲಿದೆ. ಗುತ್ತಿಗೆ ಆಧಾರಿತ

ಕೃಷಿ ಮೂಲಕ ಕೃಷಿಕರಿಗೆ ತಂತ್ರಜ್ಞಾನದಲ್ಲಿ ಸಹಾಯಹಸ್ತವೂ ಲಭಿಸುತ್ತದೆ. ಈ ಲೇಖನದಲ್ಲಿ ಚಿದಂಬರಂ ಅವರು ತಮ್ಮ ಅಪ್ರತಿಮ ಬುದ್ಧಿಮತ್ತೆಗೆ ಸರಿಯಾಗಿ ವ್ಯಾಖ್ಯಾನ ಮಾಡಿಲ್ಲ, ಬದಲಾಗಿ ಕೇವಲ ರಾಜಕೀಯ ಉದ್ದೇಶದ ವ್ಯಾಖ್ಯಾನ ಮಾಡಿದ್ದಾರೆ ಎಂಬುದೂ ಎದ್ದು ಕಾಣುವ ವಿಚಾರ.

ಸುನಾಮಿ: ಮುಂದಾಲೋಚನೆ ಒಂದೇ ಪರಿಹಾರ

ತನ್ನಿಮಿತ್ತ

ರಾಜು ಭೂಶೆಟ್ಟಿ

bhooshettiraj@gmail.com

ಮನುಷ್ಯ ಇಂದು ವಿಜ್ಞಾನ - ತಂತ್ರಜ್ಞಾನದಲ್ಲಿ ಎಷ್ಟೇ ಅದ್ಭುತವಾದ ಸಾಧನೆಯನ್ನು ಮಾಡಿದ್ದರೂ ಕೂಡ ನಿಸರ್ಗವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವುದು ಮಾತ್ರ ಅಸಾಧ್ಯದ ಮಾತು. ಅದಕ್ಕಾಗಿಯೇ ಹೇಳುವುದು ಯಾವುದೇ ಅಭಿವೃದ್ಧಿ ಕಾರ್ಯಗಳು ಪರಿಸರಕ್ಕನುಗುಣವಾಗಿರಬೇಕೇ ಹೊರತು ಪರಿಸರಕ್ಕೆ ಧಕ್ಕೆಯನ್ನುಂಟುಮಾಡಿ ಮಾಡುವ ಅಭಿವೃದ್ಧಿ ಎಂದಿಗೂ ಅಭಿವೃದ್ಧಿ ಅನಿಸಿಕೊಳ್ಳಲಾರದು. ಪರಿಸರ ಹಾಗೂ ಅಭಿವೃದ್ಧಿ ಎರಡೂ ಒಟ್ಟೊಟ್ಟಿಗೆ ಸಾಗಬೇಕಿದೆ. ಪರಿಸರದ ನಾಶ ಹಲವಾರು ನೈಸರ್ಗಿಕ ವಿಕೋಪಗಳ ರೂಪದಲ್ಲಿ ಮನುಷ್ಯನ ಅಸ್ತಿತ್ವವನ್ನೇ ಅಲ್ಲಾಡಿಸಬಹುದು. ಅದರಲ್ಲಿ ಒಂದು ಪ್ರಕಾರವನ್ನು ಹೆಸರಿಸಲಾಗಿ ಅದುವೇ ಸುನಾಮಿ. ಸುನಾಮಿಯು ಈಗಾಗಲೇ ವಿಶ್ವದ ಹಲವಾರು ರಾಷ್ಟ್ರಗಳಲ್ಲಿ ತನ್ನ ರೌದ್ರರೂಪವನ್ನು ಪ್ರದರ್ಶಿಸಿ ಸಾಕಷ್ಟು ಪ್ರಮಾಣದಲ್ಲಿ ಜನರನ್ನು ನಿರಾಶ್ರಿತರನ್ನಾಗಿ ಮಾಡಿ, ಪ್ರಾಣ ಹಾನಿಗೂ ಕಾರಣವಾದ ಉದಾಹರಣೆಗಳು ನಮ್ಮ ಕಣ್ಣು ಮುಂದೆಯೇ ಇವೆ. ಇದುವರೆಗೆ ಜಗತ್ತು 1755, 2004, 2011ರಲ್ಲಿ ಹೀಗೆ ಮೂರು ಪ್ರಮುಖ ಸುನಾಮಿ ದುರಂತಗಳು ಘಟಿಸಿ ಹೋಗಿವೆ. ಅದರಲ್ಲೂ ವಿಶೇಷವಾಗಿ ಸುನಾಮಿ ಈ ಪದವನ್ನು ಕೇಳಿದ ತಕ್ಷಣ ನೆನಪಿಗೆ ಬರುವುದು 2004ರ ಸುನಾಮಿ. ಅದು 2004 ಡಿಸೆಂಬರ್ 26, ಲಕ್ಷಾಂತರ ಜನರು ಭಯಂಕರವಾದ ಈ ಸುನಾಮಿ ಹೊಡೆತಕ್ಕೆ ಸಿಕ್ಕು ಜೀವವನ್ನು ಕಳೆದುಕೊಂಡಿರುವುದು ಮಾತ್ರ ಒಂದು ಕರಾಳ ಇತಿಹಾಸ. ಇಂಡೋನೇಷ್ಯಾದ ಸುಮಾತ್ರ ದ್ವೀಪದ ಪಶ್ಚಿಮ ಕರಾವಳಿಯ ಹಿಂದೂ ಮಹಾಸಾಗರದ ಆಳದಲ್ಲಿ ಈ ಭೂಕಂಪನದ ಕೇಂದ್ರ ಕಂಡುಬಂದಿತ್ತು. ರಿಕ್ಟರ್ ಮಾಪಕದಲ್ಲಿ ಇದರ ತೀವ್ರತೆ 9ರ ಪ್ರಮಾಣದಲ್ಲಿತ್ತು ಸುಮಾರು 30 ಅಡಿಗಳಷ್ಟು ಎತ್ತರದ ಅಲೆಗಳನ್ನು ಸೃಷ್ಟಿಸಿತ್ತು. ಭಾರತವೂ ಸೇರಿದಂತೆ ಒಟ್ಟು 14 ದೇಶಗಳ ಅಂದಾಜು 2 ಲಕ್ಷಕ್ಕೂ ಅಧಿಕ ಜನರನ್ನು ಬಲಿ ತೆಗೆದುಕೊಂಡಿತ್ತು. ಈ ಸುನಾಮಿಯ ಅಬ್ಬರ ಎಷ್ಟೊಂದು ತೀವ್ರವಾಗಿತ್ತೆಂದರೆ ನಮ್ಮ ಕಿವಿಯ ಬಳಿ ಜೆಟ್ ವಿಮಾನವೊಂದು ಸರಿದು ಹೋದರೆ ಹೇಗೆ ಕೇಳಿಸುತ್ತದೆಯೋ ಅದಕ್ಕಿಂತಲೂ ಭಯಂಕರವಾಗಿತ್ತೆಂದು ಹೇಳಲಾಗಿದೆ. 2011ರಲ್ಲಿ ಜಪಾನ್‌ನಲ್ಲಿ ಉಂಟಾದ ಭೂಕಂಪನದಿಂದಾಗಿ ಸುನಾಮಿಗೂ ಕಾರಣವಾಗಿತ್ತು. ಆ ಸಂದರ್ಭದಲ್ಲಿ ಹೊಸದೊಂದು ಸಮಸ್ಯೆಯೂ ಉದ್ಭವವಾಗಿತ್ತು. ಅದೇನೆಂದರೆ ಪರಮಾಣು ವಿದ್ಯುತ್ ಸ್ಥಾವರದ ದುರಂತಕ್ಕೂ ಕಾರಣವಾಗಿ ಜಗತ್ತಿಗೆ ಇದೊಂದು ದೊಡ್ಡ ಎಚ್ಚರಿಕೆಯ ಗಂಟೆಯಾಗಿತ್ತೆಂದರೆ ತಪ್ಪಾಗಲಾರದು. ಹೆಚ್ಚಿನ ಸುನಾಮಿಗಳಿಗೆ ಕೆಲವು ಕಾರಣಗಳನ್ನು ನೋಡಲಾಗಿ - ಮಾನವನ ಅತಿಯಾದ ಪರಿಸರ ವಿರೋಧಿ ಚಟುವಟಿಕೆಗಳು, ನೀರಿನೊಳಗಿನ ಭೂಕಂಪಗಳು, ಭೂಕುಸಿತಗಳು, ಜ್ವಾಲಾಮುಖಿ ಸ್ಫೋಟಗಳು, ಬದಲಾಗುತ್ತಿರುವ ಹವಾಮಾನ ಮುಂತಾದವುಗಳು. ಹೀಗೆ ಸುನಾಮಿಗಳಿಂದ ಅಪಾರ ಪ್ರಮಾಣದ ಆಸ್ತಿ - ಪಾಸ್ತಿ, ಸಾವು - ನೋವುಗಳು ಉಂಟಾಗುವುದರಿಂದ ಇದರ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತೀ ವರ್ಷ ನವೆಂಬರ್-5ನ್ನು ವಿಶ್ವ ಸುನಾಮಿ ಜಾಗೃತಿ ದಿನವನ್ನಾಗಿ ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಸುನಾಮಿ ಎಂದರೆ ಸಾಗರ ಅಥವಾ ಇನ್ನಿತರ ಜಲರಾಶಿಯಲ್ಲಿ ಅಗಾಧ ಪ್ರಮಾಣದ ಚಲನೆಯುಂಟಾದಾಗ ಜನಿಸುವ ಸಾಗರದ ತರಂಗಗಳ ಸರಣಿಗೆ ಸುನಾಮಿ (ತ್ಸುನಾಮಿ) ಎಂದು ಕರೆಯುವರು. ತ್ಸುನಾಮಿ ಎಂಬ ಪದ ಮೂಲತಃ ಜಪಾನಿ ಭಾಷೆಯಿಂದ ಬಂದದ್ದು. ಇಲ್ಲಿ ತ್ಸು ಅಂದರೆ ಬಂದರು ಹಾಗೂ ನಾಮಿ, ಅಂದರೆ ಅಲೆ ಎಂದರ್ಥ. ಒಟ್ಟಾರೆಯಾಗಿ ಸುನಾಮಿ ಪದವು ಜಪಾನಿ ಭಾಷೆಯಲ್ಲಿ ಬಂದರು ಅಲೆ ಎಂಬ ಅರ್ಥ ಕೊಡುತ್ತದೆ. ಭೂಕಂಪ, ಜ್ವಾಲಾಮುಖಿ ಇತ್ಯಾದಿ ಸುನಾಮಿ ಅಲೆಗಳನ್ನು ಹುಟ್ಟು ಹಾಕುವ ಸಾಮರ್ಥ್ಯ ಪಡೆದಿವೆ. ಸಮುದ್ರದಾಳದಲ್ಲಿ ಗಂಭೀರ ಸ್ವರೂಪದ ಭೂಕಂಪ ಸಂಭವಿಸಿದಾಗ ಸಮುದ್ರದ ತಳಭಾಗವು ಹಠಾತ್ತಾಗಿ ಮೇಲೇರಿ ನೀರನ್ನು ಮೇಲಕ್ಕೆ ದೂಡುತ್ತದೆ. ಆದರೆ ಗುರುತ್ವಾಕರ್ಷಣೆಯು ಈ ನೀರನ್ನು ಹಿಂದಕ್ಕೆ ಎಳೆಯುತ್ತದೆ. ಈ ಒಂದು ಪ್ರಕ್ರಿಯೆಯಲ್ಲಿ ದೊಡ್ಡ ಗಾತ್ರದ ಅಲೆ/ತರಂಗಗಳು ಏಳುತ್ತವೆ. ಪ್ರತಿಯೊಂದು ಅಲೆಗಳ ಎತ್ತರ ಆರಂಭದಲ್ಲಿ 3 ಅಡಿಗಳಷ್ಟು ಇರುತ್ತದೆ. ಸಮುದ್ರದ ದಂಡೆಯ ಸಮೀಪ ಬರುತ್ತಿದ್ದಂತೆ ಅಲೆಗಳ ಎತ್ತರ ಹೆಚ್ಚಳಗೊಳ್ಳುತ್ತಾ ಹೋಗುತ್ತದೆ. ಒಟ್ಟಾರೆಯಾಗಿ ಭವಿಷ್ಯದಲ್ಲಿ ಸುನಾಮಿಯ ಬಗ್ಗೆ ನಿಖರವಾಗಿ ಮುನ್ನಚ್ಚರಿಕೆ ನೀಡುವುದು, ಪರಿಣಾಮಕಾರಿಯಾಗಿ ತಡೆಗಟ್ಟುವ ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳನ್ನು ಕೈಗೊಳ್ಳಬೇಕಿದೆ.

ಭಟ್ಟರ್ ಸ್ಕಾಚ್

- **ಭಗತ್ ನಾರಾಯಣ, ಬೆಂಗಳೂರು**
ಭಟ್ರೇ, ಅರ್ನಾಬ್ ಗೋಸ್ವಾಮಿ ಬಂಧಿಸಿದ್ದರ ಬಗ್ಗೆ ನಿಮ್ಮ ಮೊದಲ ಪ್ರತಿಕ್ರಿಯೆ?
- ಉದ್ಧವ ಠಾಕ್ರೆ, ಅದೆಷ್ಟು ಹತಾಶರಾಗಿರಬಹುದು ?!

- **ಚಂದ್ರಶೇಖರ ಜೋಶಿ, ಬೆಳಗಾವಿ**
ಸಾರ್, ಟ್ರಂಪ್ ಗೆಲ್ಲುತ್ತಾರೆ ಎಂದು ಸೋಮಯಾಜಿ ಭವಿಷ್ಯ ನುಡಿದಿದ್ದರಂತೆ?
- ನೀವು ಸೋಲುತ್ತೀರಿ ಎಂದು ಜೋ ಬೈಡೆನ್‌ಗೆ ಹಿಂದಿನ ವರ್ಷವೇ ಹೇಳಿದ್ದರಂತೆ !

- **ಸಂಜನಾ ರವಿ, ಮೈಸೂರು**
ಸಾರ್, ಯಾವ ಪಕ್ಷದ, ಯಾರೇ ಮುಖ್ಯಮಂತ್ರಿಗಳು ಬಂದರೂ ಅವರು ನಿಮ್ಮ ಸ್ನೇಹಿತರಂತೆ?
- ಚಂದ್ರಲೋಕದಿಂದ, ಮಂಗಳ ಗ್ರಹದಿಂದ ಬಂದವರ ಬಗ್ಗೆ ಏನೂ ಹೇಳಲಾರೆ !

- **ಸುಮಾ ಅನಂತ, ರಾಜಾಜಿನಗರ**
ಭಟ್ರೇ, ನೀವು ರಾಜಕಾರಣಕ್ಕೆ ಬರುವುದು ತಡವಾಗುತ್ತಿದೆಯಲ್ಲ?
- ವಯಸ್ಸಾದ ಮೇಲೆ ಬಂದರೆ ಹೆಚ್ಚು ಗೌರವವಂತೆ !

- **ಲಕ್ಷ್ಮೀ ನಾರಾಯಣ ಸಾಗಾವಿ, ಬೆಂಗಳೂರು**
ಬಾಯಿಗೆ ಬಂದಂತೆ ಮಾತಾಡುವ ಅಪಾಯವೇನು ?
- ಕುಮಾರಸ್ವಾಮಿ ಲೆವೆಲ್ಲಿಗೆ ಕುಮಾರವ್ಯಾಸನನ್ನು ಇಳಿಸೋದು !

- **ಜೀವನ ನಾಯಕ, ಧಾರವಾಡ**
ಭಟ್ರೇ, ಹೆಣ್ಣಿನ ಸೌಂದರ್ಯವನ್ನು ಯಾವುದರಿಂದ ಅಳೆಯುತ್ತಾರೆ?
- ಸದ್ಯ ಅವಳು ತೊಡುವ ಮಾಸ್ಕ್‌ನಿಂದ!

- **ನಾರಾಯಣ ಕೆ.ಕೆ., (ಇಮೇಲ್ ಮೂಲಕ)**
ಸಾರ್, ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಏನು ಮಾಡಬೇಕು?
- ನಿನ್ನ ಸಾಮರ್ಥ್ಯವನ್ನು ನೀನು ಹೆಚ್ಚು ಹೆಚ್ಚು ನಂಬಬೇಕು !

- **ಕಲ್ಲೂರು ಪ್ರಭಾಕರ, (ಇಮೇಲ್ ಮೂಲಕ)**
ಭಟ್ರೇ, ನಿಮಗೆ ಯಾವ ದಾನದಲ್ಲಿ ನಂಬಿಕೆಯಿದೆ ?
- ಸಂವಿಧಾನದಲ್ಲಿ !

- **ಸುಮನ್ ವಿನಾಯಕ, ಬೆಂಗಳೂರು**
ಭಟ್ರೇ, ಹೆಣ್ಣಿಗೆ ಸೌಂದರ್ಯ ಮುಖ್ಯವೋ, ಗುಣ ಮುಖ್ಯವೋ?
- ಅವಳಪ್ಪನ ಬಳಿ ದುಡ್ಡಿದ್ದರೆ, ಎಲ್ಲವೂ ಗೌಣ !

- **ರವಿ ರೆಡ್ಡಿ, ಬೆಂಗಳೂರು**
ನಾನು ಅಮ್ಮಾವ್ರ ಗಂಡ ಅಲ್ಲ ಎಂದು ಯಾರಾದರೂ ಸ್ಟೇಟ್ಮೆಂಟ್ ಕೊಟ್ಟಿದ್ದಾರಾ?
- ಹಾಗೆ ಸ್ಟೇಟ್ಮೆಂಟ್ ಕೊಟ್ಟಿದ್ದಾರಾ, ಇಲ್ಲವಾ ಗೊತ್ತಿಲ್ಲ, ಆದರೆ ಹಾಗೆ ಹೇಳಿದವರಿಗೆ ಗೂಸಾ ಕೊಟ್ಟಿದ್ದಂತೂ ನಿಜ !

ಬದುಕು ಪ್ರಕೃತಿ ನಿರ್ಮಿತ ಎಂಬುದನ್ನು ಮರೆಯದಿರೋಣ..!

ಅಭಿವ್ಯಕ್ತಿ

ಶ್ರೀವರಸದ್ಯೋಜಾತ ಸ್ವಾಮೀಜಿ

varasadyojatha2015@gmail.com

ಮನುಷ್ಯನ ಬದುಕು ಭೂತಕ್ಕಿಂತಲೂ ವರ್ತಮಾನ, ವರ್ತಮಾನಕ್ಕಿಂತಲೂ ಭವಿಷ್ಯತ್ ತುಂಬಾ ಬದಲಾಗಿರುತ್ತದೆ. ಏಕೆಂದರೆ ಕಾಲಚಕ್ರದ ನಿಯಮವೇ ಹೀಗೆ. ಭೂಮಿಯೇ ಚಕ್ರಾಕಾರದಲ್ಲಿ ಸೂರ್ಯ ಚಂದ್ರರನ್ನು ಸುತ್ತುತ್ತಿರುವಾಗ ಮನುಷ್ಯನ ವರ್ತಮಾನ ಹಾಗೂ ಭವಿಷ್ಯತ್ತು ಸಹಜವಾಗಿ ತಮ್ಮ ಬದಲಾವಣೆಯ ರೂಪವನ್ನು ಹೊಂದುತ್ತವೆ. ತಾಯಿಯ ಗರ್ಭದಲ್ಲಿ ಬೀಜಾಂಕುರಗೊಳ್ಳುವ ಮೊದಲು ರಕ್ತ, ಮಜ್ಜೆ, ಮಾಂಸದಿಂದಲೂ ಪರಿಪೂರ್ಣ ರೂಪ ತಾಳಿರುವುದಿಲ್ಲ.

ಪ್ರತಿ ಸೃಷ್ಟಿಯ ಹಿಂದೆ ಒಬ್ಬ ಸೃಷ್ಟಿಕರ್ತನಿರಲೇ ಬೇಕು ಎಂಬ ಮಾತು ಆದಿ ಹಾಗೂ ಅಂತ್ಯದ ಪಲ್ಲವಿ ಯಾಗಿರುತ್ತದೆ. ಕಣ್ಣಿಗೆ ಕಾಣದ ಭಗವಂತನು 84 ಲಕ್ಷ ಜೀವರಾಶಿಗಳ ಸೃಷ್ಟಿಕರ್ತನಾದರೆ ಆತನು ಸೃಷ್ಟಿಸಿರುವ ಲಕ್ಷಾಂತರ ಜೀವರಾಶಿಗಳು ಮಾತ್ರ ಕಣ್ಣಿಗೆ ಕಾಣುವಂತೆ ತಮ್ಮ ಸೃಷ್ಟಿ ಕಾರ್ಯವನ್ನು ಮಾಡುತ್ತವೆ. ಒಂದು ಜೀವಿಯ ಸುತ್ತ ಹತ್ತಾರು ಜೀವಿಗಳು ಪೂರಕವಾಗಿ ಹಾಗೂ ಮಾರಕವಾಗಿ ವರ್ತಿಸು ತ್ತಿರುತ್ತವೆ. ಪೂರಕ ಮತ್ತು ಮಾರಕವೆಂಬುದು ಮೂಲ ಸೃಷ್ಟಿಕರ್ತ ಭಗವಂತನಿಗೆ ಮಾತ್ರ ಕಾಡದ ಶಕ್ತಿಯಾಗಿದೆ. ಇದೇ ಮೂಲ ಸೃಷ್ಟಿಕರ್ತನ ವೈಶಿಷ್ಟ್ಯ. ಆತ ಇದನ್ನು ತನ್ನ ವಿನೋದಕ್ಕಾಗಿ ಸೃಷ್ಟಿಸಿದರೂ ತನ್ನ ಸೃಷ್ಟಿಯ ವೈಶಿಷ್ಟ್ಯತೆಯನ್ನು ಮಾತ್ರ ಯಾವ ವಿಜ್ಞಾನಕ್ಕೂ, ಯಾವ ಶಕ್ತಿಗೂ ನಿಲುಕದಂತೆ ಸೃಷ್ಟಿ ಕಾರ್ಯವು ನಿರಾತಂಕವಾಗಿ ಸಾಗಿದೆ.

ಭಗ + ವಂತ = ಭಗವಂತ ಎಂಬ ಈ ಪವಿತ್ರ ಶಬ್ದದಲ್ಲಿ ಎಲ್ಲಾ ಸೃಷ್ಟಿಯ ಮಾಲೀಕನು ಎಂಬ ಅರ್ಥ ತುಂಬಿದೆ. ಯಾವುದೇ ಒಂದು ವಸ್ತು ರಚನೆಗೊಂಡರೆ ಆ ವಸ್ತುವಿನ ತಯಾರಕನು ನಮಗೆ ಸ್ಪಷ್ಟವಾಗಿ ಗೋಚರಿಸುತ್ತಾನೆ. ಆದರೆ ಇವೆಲ್ಲವುಗಳ ಸೃಷ್ಟಿಕರ್ತನು ಮಾತ್ರ ನಮಗೆ ಗೋಚರವಾಗುವುದು ಕೇವಲ ನಮ್ಮ ಕಲ್ಪನೆಗೆ ಹಾಗೂ ಕನಸಿಗೆ, ಮನಸಿಗೂ ಆತ ಬಂದು ನಿಲ್ಲುತ್ತಾನೆ. ಪ್ರತಿ ಜೀವಿಯೂ ಒಂದನೊಂದನ್ನು ಕೊಂದು ತಿನ್ನುವಂತ ಆಹಾರ ಸರಪಳಿ ಕಾಣಬಹುದಾಗಿದೆ. ಕುರಿಯನ್ನು ತೋಳ, ಜಿಂಕೆಯನ್ನು ಸಿಂಹ, ಹಸು ಹುಲಿಗೆ ಆಹಾರವಾಗಿದೆ. ಆದರೆ ಮನುಷ್ಯ ಮುಕ್ಕಾಲು ಜೀವಿಗಳನ್ನು ತನ್ನ ಆಹಾರವನ್ನಾಗಿಸಿಕೊಂಡಿದ್ದಾನೆ. ತೆರೆಮರೆಯಲ್ಲಿ ಭಗವಂತ ನಮ್ಮ ಕಣ್ಣಿಗೆ ಕಾಣದಿದ್ದರೂ ನೀ ಸೃಷ್ಟಿಸಿದ ವೈಚಿತ್ರ್ಯದೊಳಗಿರುವ ಕಲ್ಲು, ಮಣ್ಣು, ಗಿಡ ಮರದಲ್ಲಿ ನಿನ್ನನ್ನು ಕಂಡು ಪೂಜಿಸಿದೆವು ನಾವು! ನಿನ್ನ ನಿಜ ರೂಪ ನಮ್ಮ ಕಣ್ಣಿಗೆ ಕಾಣದಿದ್ದರೂ ಕೇವಲ ನಿನ್ನನ್ನು ಕಲ್ಪಿಸಿಕೊಂಡು ಪೂಜಿಸಿದ ಮಾತ್ರಕ್ಕೆ ನಮಗೆ ಮನಃಶಾಂತಿಯನ್ನು ನೀಡಿದೆ, ಅಗಾಧವಾದ ಧೈರ್ಯ ಮತ್ತು ಆತ್ಮ ವಿಶ್ವಾಸ ನೀಡಿದೆ.

ಭಗವಂತನೇ ಇವೆಲ್ಲವೂ ನೀನಾಗಿರುವಾಗ ಮತ್ತೆ ನಿನ್ನನ್ನು ನಾನು ಬೇರೆ ಯಾವುದರಲ್ಲಿ ಹುಡಕಲಿ? ಹುಡಕಲು ಹೋದರೆ ನೀನು ಸಿಗುವವನಲ್ಲ, ಮಡುವಿನಲ್ಲಿ ಅರಸುವಡೆ ನೀನು ಮತ್ಸ್ಯ ಮಂಡೂಕನಲ್ಲ, ಅಡವಿಯಲ್ಲಿ ಹುಡುಕುವೆಡೆ ನೀನು ಗಿಡಗಂಟಿ ತಾನಲ್ಲ, ಹುಡುಕುತ್ತ ಹೋದರೆ ನೀನು ಎಲ್ಲಿಯೂ ಇಲ್ಲ, ಹುಡುಕದೇ ಹೋದರೆ ನಾವು ಕಲ್ಪಿಸಿದ ವಸ್ತುವಿನಲ್ಲಿ ನೀನು ನಮಗೆ ಸಿಗುವೆ. ಅವರವರ ಭಾವಕ್ಕೆ ಅವರವರ ತೆರನಾಗಿ ರೂಪ ತಾಳುವ ನೀನು ನಮ್ಮೆಲ್ಲರ ಪಾಲಿಗೆ ಆಸ್ತಿಕನಾಗಿರುವೆ. ಭಾವನೆಯಲ್ಲಿ ನೀ ಕೊಟ್ಟ ಅರಿವಿನ ಶಕ್ತಿಯಿಂದ ನೀನಿಲ್ಲ ಎಂಬ ನಾಸ್ತಿಕತೆಯನ್ನು ಮಾತ್ರ ನಾವು ಖಂಡಿತವಾಗಿಯೂ ಹೊಡೆದೊಡಿಸಲೇಬೇಕು.

ನಿನ್ನ ಅಗಾಧ ಸೃಷ್ಟಿಯಲ್ಲಿ ಅನೇಕ ಅತ್ಯದ್ಭುತಗಳನ್ನು ಕಾಣುತ್ತೇವೆ. ಹಿಮಾಲಯದ ಗಿರಿಶಿಖರ, ಸಪ್ತ ಸಾಗರಗಳಿವೆ. ಸಾಗರಗಳಿಗೆ ಸಾವಿರಾರು ನದಿಗಳ ಸಂಗಮ, ಕಣ್ಣಿಗೆ ಕಂಡಲೆಲ್ಲಾ ಗಿಡಮರ ಬಳ್ಳಿಗಳು, ಅನೇಕ ಜೀವರಾಶಿಗಳು, ಜಲಚರಗಳು ಇವೆಲ್ಲಾ ಅದ್ಭುತಗಳನ್ನು ವರ್ಣಿಸುತ್ತಾ ಹೋದರೆ ಅತೀ ಎತ್ತರದ ಶಿಖರಗಳಿಗೆ 'ಗೌರಿ ಶಂಕರ' ಎಂದೇ ಕರೆಯುವ ವಾಡಿಕೆ ನಮ್ಮಲ್ಲಿದೆ. ಮೂಲ ಸೃಷ್ಟಿಯು ಶಿವಶಕ್ತಿಯಿಂದ ಆಗಿರುವುದರಿಂದ ನಮ್ಮ ಕಲ್ಪನೆ ಮಾತಾಪಿತರ ಕಲ್ಪನೆಗೆ ಸಾಗುತ್ತದೆ. ಶಿವ ಪಾರ್ವತಿಯರೇ ನಮ್ಮ ಕಣ್ಣಂಚಿನ ಪೂಜ್ಯ ದೈವತ್ವವಾಗಿವೆ. ಕೋಟಿ ಕೋಟಿ ಮಾನವರಿದ್ದರೂ ಒಬ್ಬರಂತೆ ಇನ್ನೊಬ್ಬರಿಲ್ಲ, ಇದೇ ನಿನ್ನ ಸೃಷ್ಟಿಯ ವೈಚಿತ್ರ್ಯ. ಮನುಷ್ಯ ಸೃಷ್ಟಿಸಿದ ವಸ್ತುಗಳಿಗೆ ಗುರುತಿನ ಮುದ್ರೆಯೊತ್ತಿ ಗುರುತಿಸುತ್ತಾನೆ. ಆದರೆ ನೀ ಸೃಷ್ಟಿಸಿದ ವಸ್ತುವಿಗೆ ಯಾವ ಮುದ್ರೆಯ ಅವಶ್ಯಕತೆಯೂ ಇಲ್ಲ, ಅಷ್ಟು ಸುಂದರವಾಗಿ ನೈಪುಣ್ಯತೆಯಿಂದ ಸೃಷ್ಟಿಸಿರುವೆ.

ಸೃಷ್ಟಿಯ ನಂತರ ತಾನು ಸೃಷ್ಟಿಸಿದ ಜೀವಿಯೂ ಅದು ಯಾವುದೇ ಆಗಿರಲಿ ತನ್ನ ಸೃಷ್ಟಿಯ ಜೀವಾಣುವಿಗೆ ಬಲ ಬರುವವರೆಗೆ ಲಾಲನೆ ಪಾಲನೆ ಪೋಷಣೆ ಮಾಡುತ್ತದೆ. ಬಲ ಬಂದ ನಂತರ ಅದನ್ನು ಸ್ವಚ್ಛಂದವಾಗಿ ಬದುಕಲು ಬಿಡುತ್ತದೆ. ರೆಕ್ಕೆ ಬಲಿತ ಹಕ್ಕಿ, ಆಗಸಕ್ಕೆ ಹಾರುವಂತೆ ಆದರೆ ಯಾವ ಜೀವಿಯ ಸೃಷ್ಟಿಯಿಂದ ಲಾಲನೆ ಪಾಲನೆ ಪೋಷಣೆಯಿಂದ ತನ್ನ ರೆಕ್ಕೆಯನ್ನು ಬಲಗೊಳಿಸಿಕೊಂಡಿರುತ್ತದೆಯೋ ಆ ಹಕ್ಕಿ ಮಾತ್ರ ತನ್ನ ಕರ್ತವ್ಯದಿಂದ ವಂಚಿತಗೊಳ್ಳಲಾರದು. ತನಗೆ ಜನ್ಮಕೊಟ್ಟ ಜೀವ ಜೋಡಿಗಳಂತೆ ತಾನೂ ಬದುಕು ನಿರ್ಮಿಸಿಕೊಳ್ಳುತ್ತದೆ. ನಿರ್ಮಿಸಿಕೊಂಡು ಆಹಾರ, ನಿದ್ರಾ, ಭಯ, ಮೈಥುನ ಇವುಗಳ ಚಕ್ರದಲ್ಲಿ ಸುಂದರವಾದ ಬದುಕನ್ನು ನಿರ್ಮಿಸಿಕೊಳ್ಳುತ್ತದೆ. ನಿರ್ಮಿಸಿಕೊಂಡು ತಾನೂ ತನ್ನ ಕರ್ತವ್ಯ ಪಾಲನೆ ಮಾಡುತ್ತದೆ.

ಮನುಷ್ಯ ಬದುಕುತ್ತಿರುವ ರೀತಿ ಭೂತ, ವರ್ತಮಾನ, ಭವಿಷ್ಯತ್ತಿನ ಈ ಮಾನವತ್ರಯಗಳಲ್ಲಿ ಮನುಷ್ಯನ ಬದುಕು ಭೂತಕ್ಕಿಂತಲೂ ವರ್ತಮಾನ, ವರ್ತಮಾನಕ್ಕಿಂತಲೂ ಭವಿಷ್ಯತ್ ತುಂಬಾ ಬದಲಾಗಿರುತ್ತದೆ. ಏಕೆಂದರೆ ಕಾಲಚಕ್ರದ ನಿಯಮವೇ ಹೀಗೆ. ಭೂಮಿಯೇ ಚಕ್ರಾಕಾರದಲ್ಲಿ ಸೂರ್ಯ ಚಂದ್ರರನ್ನು ಸುತ್ತುತ್ತಿರುವಾಗ ಮನುಷ್ಯನ ವರ್ತಮಾನ ಹಾಗೂ ಭವಿಷ್ಯತ್ತು ಸಹಜವಾಗಿ ತಮ್ಮ ಬದಲಾವಣೆಯ ರೂಪವನ್ನು ಹೊಂದುತ್ತವೆ. ತಾಯಿಯ ಗರ್ಭದಲ್ಲಿ ಬೀಜಾಂಕುರಗೊಳ್ಳುವ ಮೊದಲು ರಕ್ತ, ಮಜ್ಜೆ, ಮಾಂಸದಿಂದಲೂ ಪರಿಪೂರ್ಣ ರೂಪ ತಾಳಿರುವುದಿಲ್ಲ. ಅಂಕುರಗೊಂಡ ಮೇಲೆ ಬೆಳೆಯುತ್ತಾ ಪಿಂಡವಾಗುತ್ತದೆ. ಪಿಂಡಜವಾಗಲಿ, ಅಂಡಜವಾಗಲಿ ಭೂಮಿಗೆ ಜೀವ ರೂಪ ತಾಳಿ ಕಣ್ಣಿಗೆ ಕಾಣಿಸಿಕೊಳ್ಳುತ್ತದೆ. ಜೀವರೂಪ ಕ್ಕಿಂತ ಪೂರ್ವದಲ್ಲಿ ಅದು ಒಂದು ಘನೀಕರಣಗೊಂಡ ವಸ್ತು ಎನಿಸುತ್ತದೆ. ಇವೆರಡರ ರೂಪ ಭೂತ ಹಾಗೂ ವರ್ತಮಾನವನ್ನು ನಮಗೆ ಸೂಚಿಸುತ್ತವೆ. ಭವಿಷ್ಯತ್ತಿನಲ್ಲಿ ನಾವು ಕಾಣುವ ರೂಪವೇ ಅದ್ಭುತ ಬದಲಾವಣೆಯ ಕಲ್ಪವಾಗಿರುತ್ತದೆ. ಬಾಲ್ಯ, ಯೌವ್ವನ, ಮುಪ್ಪು ನಮ್ಮ ಭಷ್ಯತ್ತಿನ ರೂಪಗಳಾಗಿರುತ್ತವೆ.

ಎಲ್ಲಾ ಜೀವಿಯೂ ಬದುಕುವ ಹಕ್ಕು ಪಡೆದುಕೊಂಡೆ ಭೂಮಿಗೆ ಕಣ್ಣು ತೆರೆದು ಬಂದಿರುತ್ತದೆ. ಆದರೆ ಒಂದು ಆಶ್ಚರ್ಯವೆಂದರೆ ಭಗವಂತನು ಮಾತ್ರ ಪ್ರತಿ ಜೀವಿಗೂ ಬಗೆ ಬಗೆಯ ಆರೋಗ್ಯ, ಆಯುಷ್ಯ ನೀಡಿ ಭೂಮಿಗೆ ಕಳಿಸಿರುತ್ತಾನೆ. ಆತನು ನಿಗದಿಪಡಿಸಿದ ಆಯುಷ್ಯದ ಪರಿಮಿತಿಯಲ್ಲಿಯೇ ಪ್ರತಿ ಜೀವಿಯೂ ಬಾಳಿ ಬದುಕುತ್ತದೆ. ಇಲಿಯ ಆಯುಷ್ಯ ಎರಡೇ ವರ್ಷವಾದರೂ ಮಾನವನ ನೂರು ವರ್ಷದ ಎಲ್ಲಾ ಕ್ರಿಯೆಗಳನ್ನು ಅದು ಮಾಡಿ ಮುಗಿಸಿ ಬಿಡುತ್ತದೆ. ಹೂವಿನ ಆಯುಷ್ಯ ಕೇವಲ ಅರ್ಧ ದಿನವಾದರೂ ಅರ್ಧ ದಿನದ ತನ್ನ ಆಯುಷ್ಯದಲ್ಲಿ ಮಾನವನ ನೂರು ವರ್ಷದ ಆಯುಷ್ಯವನ್ನು ನಾಚಿಸುವಂತೆ ಬದುಕುತ್ತದೆ. ಮಾನವ ಬದುಕಿನ ಸಂಗಾತಿ ಪ್ರಾಣಿಗಳಲ್ಲಿ ಶ್ವಾನವು ಕೇವಲ ಹನ್ನೆರಡು ವರ್ಷ ಬಾಳಿ ಬದುಕುತ್ತದೆ. ಈ ಅವಧಿಯಲ್ಲಿ ತನ್ನೆಲ್ಲಾ ಆಸೆ ಆಕಾಂಕ್ಷೆಗಳನ್ನು ಪರಿಪೂರ್ಣಗೊಳಿಸುತ್ತದೆ.

ಮನುಷ್ಯ ಮಾತ್ರ ನೂರು ವರ್ಷದ ಆಯುಷ್ಯವನ್ನು ಭಗವಂತನಲ್ಲಿ ಬೇಡಿಕೊಂಡು ಬದುಕನ್ನು ಕಟ್ಟಿಕೊಂಡರೂ ಭಗವಂತ ಮಾತ್ರ ಆತನಿಗೆ ಪುರುಷಾರ್ಥಗಳನ್ನು ನೀಡಿ ಅವುಗಳನ್ನು ಅಚ್ಚುಕಟ್ಟಾಗಿ ಬದುಕಿನ ಅವಧಿಯಲ್ಲಿ ಕಳೆಯಬೇಕೆಂದು ಜ್ಞಾಪಿಸಿದ್ದಾನೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಫಲಪುರುಷಾರ್ಥಗಳು. ಮಾನವನು ಮಾತ್ರ ಪುರುಷಾರ್ಥಗಳನ್ನು ಗೆಲ್ಲಲೇಬೇಕು. ಪುರುಷಾರ್ಥಗಳು ಹೆಜ್ಜೆ ತಪ್ಪಿದರೆ ಮಾನವ ಇಡೀ ಬದುಕು ಹೆಜ್ಜೆ ತಪ್ಪುತ್ತದೆ. ಭೂಮಿ, ಗಾಳಿ, ನೀರು, ಶಾಖ, ಬಯಲು ಈ ಪಂಚಭೂತಗಳಿಂದಲೇ ನಿರ್ಮಾಣಗೊಂಡ ಮಾನವನ ಮೂಲ ಸೌಕರ್ಯಗಳಾದ ಆಹಾರ, ವಸತಿ, ನೀರು ಮುಂತಾದವುಗಳನ್ನು ಮಾನವ ರಕ್ಷಿಸದೇ ಹೋದರೆ ಮನುಷ್ಯನಿಗೆ ಸೃಷ್ಟಿಯು ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತದೆ. ಮನುಷ್ಯ ದುರಾಸೆಗೆ ಒಳಪಡಬಾರದು. ಆಸೆಗೆ ಆತನ ಬದುಕುವ ಇತಿಮಿತವಾಗಿರಬೇಕು. ಆಗ ಮನುಷ್ಯನು ತನ್ನ ಆಯುಷ್ಯದ ಪರಿಪೂರ್ಣತೆಯನ್ನು ಕಳೆಯಬಲ್ಲ.

ನಿಸರ್ಗವನ್ನು ರಕ್ಷಿಸದೇ ಹೋದರೆ ನಿಸರ್ಗವು ಖಂಡಿತವಾಗಿಯೂ ನಮ್ಮನ್ನು ಭಕ್ಷಿಸುತ್ತದೆ. ನಿಸರ್ಗದಂಥ ಉಪಕಾರಿ ಮತ್ತೊಂದಿಲ್ಲ. ಅದನ್ನು ನಾವು ಗಮನಿಸದೇ ಹೋದರೆ ಅದು ನಮಗೆ ಅಪಕಾರ ಮಾಡುವುದರಲ್ಲಿ ಹಿಂಜರಿಯುವುದಿಲ್ಲ. ಹೀಗಾಗಿ ನಿಸರ್ಗವನ್ನು ನಾವು ಗೌರವಿಸಬೇಕು, ಪೂಜಿಸಬೇಕು ಹಾಗೂ ರಕ್ಷಿಸಬೇಕು. ಕಲ್ಲು ಮಣ್ಣುಗಳ ಗುಡಿಯೊಳಗೆ ಕಲ್ಲಿನ ಮೂರ್ತಿಯನ್ನು ಇಟ್ಟು ಪೂಜಿಸುವ ನಾವು ಅದು ನಿಸರ್ಗದ ಒಂದು ಭಾಗವೆಂಬುದನ್ನು ಮರೆತು ಬಿಡುತ್ತೇವೆ. ಇನ್ನೊಬ್ಬರ ಬದುಕನ್ನು ಪ್ರಶ್ನಿಸುವುದು ನಮ್ಮ ಕರ್ತವ್ಯವಲ್ಲ. ನಮ್ಮ ಬದುಕಿನ ಶ್ರೇಷ್ಠತೆಯನ್ನು ಜಗತ್ತಿನ ಮುಂದಿಟ್ಟು, ಜಗವೇ ನಮ್ಮ ಬದುಕಿನ ಫಲಿತಾಂಶವನ್ನು ನೀಡಬೇಕು. ಇದೇ ನಿಜವಾದ ಸೃಷ್ಟಿಯು ನಮಗೆ ಮೌನವಾಗಿ ನೀಡುವ ಉತ್ತರ. ಮಾನವನ ಬದುಕು ಪ್ರಕೃತಿ ನಿರ್ಮಿತ ಎಂಬುವುದನ್ನು ಮರೆಯದಿರೋಣ.